

ಹೈಕೋರ್ಟ್‌ನ ಮಹಾದ್ವಾರ



ಭವ್ಯ ಅಡ್ವೊಕೇಟ್ ಬ್ಲಾಕ್


ಮಾಲ್‌ಗಳನ್ನು ನೆನಪಿಸುವಂತಿರುವ ಹೈಕೋರ್ಟ್ ಸಂಕೀರ್ಣದ ಒಳಾಂಗಣ

ನ್ಯಾಯದಾನ, ಶಿಕ್ಷೆ ಪ್ರಕಟಗೊಳ್ಳುವ ಒಟ್ಟು ಪ್ರಕ್ರಿಯೆಗೆ ಹೊಸ ಹೈಕೋರ್ಟ್ ಉತ್ತರದಂತೆ ಕಾಣಿಸುತ್ತದೆ.

ವಿಶಾಲವಾದ ಹೈಕೋರ್ಟ್ ಕಟ್ಟಡ ಜಾರ್ಖಂಡ್ ಜನರಲ್ಲಿ ಹೆಮ್ಮೆಯ ಜೊತೆಗೆ ಭರವಸೆಗಳ ಕಿರಣಗಳನ್ನು ಮೂಡಿಸಿದೆ. ರಾಜ್ಯವೊಂದು ತನ್ನ ವ್ಯಾಪ್ತಿಯಲ್ಲಿ ನ್ಯಾಯದಾನ ವ್ಯವಸ್ಥೆ ಸದೃಢವಾಗಿರಬೇಕು ಎಂದು ಆಶಿಸಿ, ಮಹತ್ವಾಕಾಂಕ್ಷೆಯಿಂದ ಕಾರ್ಯೋನ್ಮುಖ ಆಗುವುದೆಂದರೆ, ಅದು ಸಮನ್ವಯ ದೃಷ್ಟಿಕೋನವನ್ನು ಹೊಂದಿರುವುದಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದು ಅತ್ಯುತ್ತಮವಾದ ಹೆಜ್ಜೆ. ಕಾರ್ಯಾಂಗ–ಶಾಸಕಾಂಗದ ಕಟ್ಟಡಗಳಷ್ಟೇ ಭವ್ಯವಾಗಿದ್ದರಷ್ಟೇ ಸಾಲದು, ನ್ಯಾಯಾಂಗದ ಕಟ್ಟಡವೂ ಭವ್ಯವಾಗಿರಬೇಕು ಎನ್ನುವುದನ್ನು ಜಾರ್ಖಂಡ್ ದೇಶಕ್ಕೆ ತೋರಿಸಿಕೊಡಲು ಹೊರಟಂತಿದೆ.

1972ರಲ್ಲಿ ಪಾಟ್ನಾ ಹೈಕೋರ್ಟ್‌ನ ಸರ್ಕೀಟ್ ಬೆಂಚ್ ಆಗಿ ಜಾರ್ಖಂಡ್‌ನ ನ್ಯಾಯಾಂಗ ವ್ಯವಸ್ಥೆ ಕಾರ್ಯಾರಂಭ ಮಾಡಿತ್ತು. 2000ನೇ ಇಸವಿಯಲ್ಲಿ ಬಿಹಾರ ರಾಜ್ಯದಿಂದ ಪ್ರತ್ಯೇಕಗೊಂಡು, ಜಾರ್ಖಂಡ್ ರಾಜ್ಯ ಅಸ್ತಿತ್ವಕ್ಕೆ ಬಂದ ನಂತರ, ಇದು ರಾಜ್ಯ ಹೈಕೋರ್ಟ್ ಆಗಿ ಗುರುತಿಸಿಕೊಂಡಿತು. ನಂತರದ ದಿನಗಳಲ್ಲಿ, ನ್ಯಾಯಾಲಯದಲ್ಲಿ ದಾಖಲಾಗುವ ಪ್ರಕರಣಗಳ ಸಂಖ್ಯೆ ಹೆಚ್ಚಾಗತೊಡಗಿದ್ದರಿಂದ ಸಮಗ್ರ ವ್ಯವಸ್ಥೆಯಿರುವ ಹೊಸ ಕಟ್ಟಡದ ಅವಶ್ಯಕತೆ ಸಹಜವಾಗಿಯೇ ತಲೆದೋರಿತು. ಜೂನ್ 11ರಂದು ನ್ಯಾಯಾಲಯದ ಬೇಸಿಗೆ ರಜಾ ಅವಧಿ ಮುಕ್ತಾಯವಾಗಿದ್ದು, 12ರಿಂದ ಹೊಸ ಕಟ್ಟಡದಲ್ಲಿ ನ್ಯಾಯದಾನ ಚಟುವಟಿಕೆಗಳು ಆರಂಭವಾಗಿವೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹೊಸ ಕೋರ್ಟ್ ಸಂಕೀರ್ಣವನ್ನು ಉದ್ಘಾಟಿಸಿದ ಸಂದರ್ಭದಲ್ಲಿ, ‘20 ವರ್ಷಗಳ ಅವಧಿಯಲ್ಲಿ ಜಾರ್ಖಂಡ್ ಹೈಕೋರ್ಟ್‌ನಲ್ಲಿನ ನ್ಯಾಯಾಧೀಶರ ಸಂಖ್ಯೆ 12ರಿಂದ 24ಕ್ಕೆ ಏರಿದೆ. ಅಷ್ಟೇಅಲ್ಲ, ಈ ಕೋರ್ಟ್‌ನಲ್ಲಿ ನೀಡಲಾದ ಅನೇಕ ತೀರ್ಪುಗಳು ಐತಿಹಾಸಿಕ ಮೈಲುಗಲ್ಲುಗಳಾಗಿವೆ. ನ್ಯಾಯಾಲಯವೆಂದರೆ ಒಂದು ಕಟ್ಟಡವಷ್ಟೇ ಅಲ್ಲ. ಹೈಕೋರ್ಟ್ ನ್ಯಾಯದೇಗುಲವಿದ್ದಂತೆ. ಅಲ್ಲಿ ನಾವು ವ್ಯಾಜ್ಯಗಳ ನಿರ್ವಹಣೆಯ ವೆಚ್ಚವು ಕಡಿಮೆಯಾಗುವಂತೆ ನೋಡಿಕೊಳ್ಳಬೇಕು. ನ್ಯಾಯವು ಹೆಚ್ಚು ಹೆಚ್ಚು ಜನರಿಗೆ ತಲುಪುವಂತೆ ನೋಡಿಕೊಳ್ಳಬೇಕು’ ಎಂದು ಹೇಳಿದ್ದರು. ರಾಷ್ಟ್ರಪತಿಯವರ ಮಾತುಗಳು ನ್ಯಾಯಾಂಗದ ಘನತೆಯನ್ನು ಸೂಚಿಸುವುದರ ಜೊತೆಗೆ, ಜಾರ್ಖಂಡ್ ಹೈಕೋರ್ಟ್‌ನ ನೂತನ ಕಟ್ಟಡಕ್ಕಿರುವ ಚಾರಿತ್ರಿಕ ಆಯಾಮವನ್ನೂ ಧ್ವನಿಸುವಂತಿದ್ದವು.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂಭ್ರಮದ ಸಂದರ್ಭದಲ್ಲಿ ರೂಪುಗೊಂಡಿರುವ ಹೈಕೋರ್ಟ್‌ನ ನೂತನ ಕಟ್ಟಡ, ಜಾರ್ಖಂಡ್‌ನ ಹೆಮ್ಮೆಯಷ್ಟೇ ಅಲ್ಲ; ಇಡೀ ದೇಶದ ಹೆಮ್ಮೆಯೂ ಹೌದು.

ಪ್ರತಿಕ್ರಿಯಿಸಿ: **feedback@sudha.co.in**